ಸಿ ಸಿ ನಂಃ 193/2017
ಚಾಸಾ 1 ಪ್ರಾಸಾ 1
ದಿನಾಂಕಃ 09.04.2021
ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಃ ನಾಗನಗೌಡ ಪಾಟೀಲ |
| ತಂದೆಯ ಹೆಸರು | ಃ ನೀಲಕಂಠಗೌಡ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ಸಿ ಡಿ ಪಿ ಒ, ಕೂಡಲಗಿ |
| ವಾಸ ಸ್ಥಳ | ಃ ಸಾಃ ಕೂಡಲಗಿ ತಾಃ ಕೂಡಲಗಿ |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ನಾನು ಸಿ ಡಿ ಪಿ ಒ ಕಚೇರಿಯಲ್ಲಿ 2016 ರಿಂದ 2019 ರವರೆಗೆ ಸಿ ಡಿ ಪಿ ಒ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

2016 ನೇ ಸಾಲಿನಲ್ಲಿ ನರಗುಂದ ಸಿಡಿಪಿಒ ಕಚೇರಿಯಿಂದ ಅಂಗನವಾಡಿ ಸಹಾಯಕಿ ಉದ್ದೇಗೆ ಅರ್ಜಿಯನ್ನು ಕರೆದಿದ್ದೇವು. ಸದರಿ ಹುದ್ದೇಗೆ ಆರೋಪಿತಳು ಮತ್ತು ಇತರ 11 ಜನರು ಅರ್ಜಿಯನ್ನು ಸಲ್ಲಿಸಿದ್ದರು. ನಂತರ ಸದರಿಯವರು ಸಲ್ಲಿಸಿದ ಅರ್ಜಿಗಳನ್ನು ಮತ್ತು ಅರ್ಜಿಗಳೊಂದಿಗೆ ದಾಖಲೆಗಳನ್ನು ನೇಮಕಾತಿ ಸಮಿತಿಗೆ ಕಳುಹಿಸಿಕೊಟ್ಟಿದ್ದೇವು. ನೇಮಕಾತಿ ಸಮಿತಿಯಲ್ಲಿ ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ಪರೀಶಿಲನೆ ಮಾಡಿದಾಗ ಆರೋಪಿತಳು ಅರ್ಜಿಯೊಂದಿಗೆ ಸಲ್ಲಿಸಿದ ಶಾಲಾ ದಾಖಲಾತಿಯಲ್ಲಿ ಒಂದನೆ ತರಗತಿ ಇದಿದ್ದನ್ನು ನಾಲ್ಕನೆ ತರಗತಿ ಅಂತಾ ತಿದ್ದುಪಡಿ ಮಾಡಿರುವುದು ಕಂಡು ಬಂದಿತು. ನಂತರ ಬಿಇಒ ಹುಬ್ಬಳ್ಳಿಯವರಿಗೆ ಪತ್ರವನ್ನು ಬರದು ಆರೋಪಿತಳಿಗೆ ಸಂಬಂಧಿಸಿದ ಶಾಲಾ ದಾಖಲಾತಿಗಳನ್ನು ಪೂರೈಸಲು ಕೇಳಿಕೊಂಡೆವು. ನಂತರ ಬಿಇಒ ರವರು ಆರೋಪಿತಳಿಗೆ ಸಂಬಂಧಿಸಿದ ಶಾಲಾ ದಾಖಲಾತಿಗಳನ್ನು ನೇಮಕಾತಿ ಸಮಿತಿಗೆ ಕಳುಹಿಸಿಕೂಟ್ಟರು. ಸದರಿ ಹುಬ್ಬಳಿ ಬಿಇಒ ರವರು ಕಳುಹಿಸಿಕೊಟ್ಟ ಆರೋಪಿತಳಿಗೆ ಸಂಬಂಧಪಟ್ಟ ಶಾಲಾ ದಾಖಲಾತಿಯಲ್ಲಿ ಒಂದನೆ ತರಗತಿ ಮಾತ್ರ ಓದಿರುತ್ತಾಳೆ ಅಂತಾ ಕಂಡು ಬಂದಿತು. ನಂತರ ಜಿಲ್ಲಾಧಿಕಾರಿ ಗದಗರವರು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿರುತ್ತಾಳೆ ಎಂದು ಅವಳ ಮೇಲೆ ಕ್ರಿಮಿನಲ ಪ್ರಕರಣವನ್ನು ನನಗೆ ದಾಖಲಿಸಲು ಸೂಚಿಸಿದ ಮೇರೆಗೆ ನಾನು ಆರೋಪಿತಳ ವಿರುದ್ಧ ನರಗುಂದ ಪೊಲೀಸ ಠಾಣೆಯಲ್ಲಿ ಫಿರ್ಯಾದಿಯನ್ನು ನೀಡಿರುತ್ತೇನೆ. ಅದೇ ರೀತಿ ನಾನು ಈ ಪ್ರಕರಣದಲ್ಲಿ ಮರು ಹೇಳಿಕೆಯನ್ನು ಸಹ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ

ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 1 ಎಂದು ಗುರುತಿಸಿ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಹುಬ್ಬಳಿ ಬಿಇಒ ರವರು ನೇಮಕಾತಿ ಸಮಿತಿಗೆ ಕಳುಹಿಸಿಕೊಟ್ಟ ಆರೋಪಿತಳಿಗೆ ಸಂಬಂಧಿಸಿದ ಶಾಲಾ ದಾಖಲಾತಿಯನ್ನು ಮತ್ತು ವರ್ಗಾವಣೆ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸಸಅರವರು ಕಾಲಾವಾಕಾಶ ಕೇಳಿದ್ದರಿಂದ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು, ನರಗುಂದ.